ಶ್ರೀ ರಾಮರೆಡ್ಡೆಪ್ಪ ರವರ ಸರ್ವೆ.ನಂ.53 (ಭಾಗ) ಕೋಳೂರು-ಗ್ರಾಮ, ಕೋಳೂರು-ಗ್ರಾಮ ಪಂಚಾಯತಿ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 06.00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 66,882 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ತೆರೆದ ಅರೆ-ಯಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಸೆಮಿ ಮೆಕ್ಯಾನಿಸೆಡ್ ಮೆಥೆಡ್) ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಸಂಬಂಧಿಸಿದಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಉದ್ದೇಶಿಸಿರುತ್ತಾರೆ.

ದಿನಾಂಕ: 18.10.2022

ವೇಳೆ : ಬೆಳ್ಳಿಗ್ಗೆ.11.00 ಘಂಟೆ,<br>
ಸ್ಥಳ : ಉದ್ದೇಶಿತ ಯೋಜನೆಯ ಪ್ರದೇಶ,<br>
ಶ್ರೀ ರಾಮರೆಡ್ಡೆಪ್ಪ ರವರ ಸರ್ವೆ.ನಂ.53 (ಭಾಗ)<br>
ಕೋಳೂರು-ಗ್ರಾಮ, ಕೋಳೂರು-ಗ್ರಾಮ<br>
ಪಂಚಾಯತಿ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆ

ಶ್ರೀ ರಾಮರೆಡ್ಡೆಪ್ಪ ರವರು, ಜಿಲ್ಲೆಯಲ್ಲಿ 06.00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 66,882 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ತೆರೆದ ಅರೆ-ಯಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಸೆಮಿ ಮೆಕ್ಯಾನಿಸೆಡ್ ಮೆಥೆಡ್) ಪ್ರಕಾರ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 18.10.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಶ್ರೀ ರಾಮರೆಡ್ಡೆಪ್ಪ ರವರ ಸರ್ವೆ.ನಂ.53 (ಭಾಗ) ಕೋಳೂರು-ಗ್ರಾಮ, ಕೋಳೂರು-ಗ್ರಾಮ ಪಂಚಾಯತಿ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಥ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು (PPT) ಪ್ರದರ್ಶನದ ವಿವರಗಳು | : | ಅನುಬಂಧ-5 |
| ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಕ್ರಿಯೆಯ ಛಾಯಾ ಚಿತ್ರಗಳು | : | ಅನುಬಂಧ-6 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು. | | ಅನುಬಂಧ-7 |
| ಸಾರ್ವಜನಿಕರು/ಪರಿಸರಆಸಕ್ತ ಸಂಪನ್ಮೂಲವ್ಯಕ್ತಿಗಳುಸಲ್ಲಿಸಿದ ಅಹವಾಲುಗಳು | : | ಅನುಭಂಧ-8 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-2006 (ತಿದ್ದುಪಡಿ ದಿನಾಂಕ: 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ:ಹಿಭೂಇ/ಕೊಖವಿ.ಮಗಗು/2020-21/5186 ದಿನಾಂಕ:07.01.2021 ರಂದು "ಸಾಮಾನ್ಯ ಮರಳು ಗಣಿಗಾರಿಕೆ" ಯೋಜನೆಯನ್ನು ಅನುಮೋಧಿಸಿ, ಒಟ್ಟು 6 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 66,882 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ (ಅರೆ-ಯಾಂತ್ರಿಕೃತ ಪದ್ಧತಿ) ಉತ್ಪಾದನೆಯ ಯೋಜನೆಯನ್ನು ಹೊಂದಿದೆ. (ಕ್ವಾರಿ ಯೋಜನೆಯ ಅವಧಿ 3 ವರ್ಷ). ಕ್ವಾರಿ ಯೋಜನೆಯನ್ನು ಅನುಮೋದಿಸಿ ವರ್ಷಕ್ಕೆ 66,882 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ ಉತ್ಪಾದನೆಯ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಎ ಅಧಿಸೂಚನೆ ದಿನಾಂಕ: 14-09-2006 ರ ಪ್ರಕಾರ ಈ ಗಣಿಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆಧಾರದ ಮೇಲೆ ಸದರಿ ಯೋಜನೆಯ Standards Terms of Reference ಅನ್ನು ದಿನಾಂಕ: 14.01.2022 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಕೋರುವಂತೆ ಶ್ರೀ ರಾಮರೆಡ್ಡೆಪ್ಪ ಇವರು ತಿಳಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಮತ್ತು ಸಮಯವನ್ನು ನೀಡಲು ದಿನಾಂಕ:-30.09.2022 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 18.10.2022 ರಂದು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ.

ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ " ಪ್ರಜಾವಾಣಿ" (ಕನ್ನಡ) ," ದಿ ಹಿಂದು " (ಆಂಗ್ಲ ಭಾಷೆ) ಯಲ್ಲಿ ದಿನಾಂಕ: 02.10.2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು, ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 18.10.2022ರಂದು, ಬೆಳಿಗ್ಗೆ.11.00 ಘಂಟೆಗೆ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎಸ್ ಸಿ ಸುರೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಶ್ರೀಮತಿ ಸಾವಿತ್ರಿ ಬಿ ಕಡಿ ಅಪರ ಜಿಲ್ಲಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ತಹಶೀಹಲ್ದಾರವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸ್ವಾಗತಿಸಿದರು, ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಎಂಟು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ: ಹಾರಿಝಾನ್ ವೆಂಚುರಿಸ್ ಇವರು ಸದರಿ ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು (PPT) ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

ಶ್ರೀ. ಮಲ್ಲೇಶಪ್ಪ ಕೋಳೂರು-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಮರಳು ಗಣಿಗಾರಿಕೆಯ ಪಕ್ಕದಲ್ಲಿ ಹಳ್ಳವಿರುತ್ತದೆ, ಹಳ್ಳಕ್ಕೆ ಹತ್ತಿರವಾಗಿ ಬಂಡೆಗಳಿರುತ್ತವೆ, ಹಳ್ಳದ ನೀರು ಹರಿದುಹೊಗುವುದರಿಂದ ಬಂಡೆಗಳ ಪಕ್ಕದಲ್ಲಿರುವ ಬದು ಹೊಡೆದು ಹೋಗುವ ಸಾಧ್ಯೆ ಇರುತ್ತದೆ ಮತ್ತು ಮರಳು ಗಣಿಗಾರಿಕೆಯಿಂದ ತೊಂದರೆಯಾಗುತ್ತದೆ.
- ಎಷ್ಟು ಆಳದ ವರೆಗೆ ಮರಳನ್ನು ತೆಗೆಯಬಹುದಾಗಿರುತ್ತದೆ.

ಶ್ರೀ. ರುದ್ರಗೌಡ , ಕೋಳೂರು-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವುದು.
- ಮರಳು ಗಣಿಗಾರಿಕೆಯಿಂದ ಬರುವ ವೆಸ್ಟೇಜ್/ತ್ಯಾಜ್ಯವನ್ನು ತೆಗೆದುಕೊಂಡು ಹೋಗಲು ಗ್ರಾಮಸ್ಥರ ಟ್ರ್ಯಾಕ್ಟರ್ ಗಳನ್ನು ಬಳಸಿಕೊಂಡರೆ ಇದರಿಂದ ಗ್ರಾಮಸ್ಥರಿಗೆ ಉದ್ಯೋಗ ದೊರೆತಂತಾಗುತ್ತದೆ.
- ಸದರಿ ಗ್ರಾಮಸ್ಥರಿಗೆ ಉದ್ಯೋಗಾವಕಾಶ ನೀಡಿದ್ದಲ್ಲಿ ಗ್ರಾಮಸ್ಥರು ಬೆಂಬಲವನ್ನು ಕೋಡುತ್ತಾರೆ, ಇದರಿಂದ ಗ್ರಾಮಸ್ಥರಿಗೆ ಅನೂಕೂಲವಾಗುತ್ತದೆ.

ಶ್ರೀ. ಮಾರುತಿ ವಾಲಿಕಾರ, ಗ್ರಾಮ ಪಂಚಾಯತಿ ಸದಸ್ಯರು, ಕೋಳೂರು-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಇಲ್ಲಿ ಶಾಲೆ ಇರುವುದರಿಂದ ಅಕ್ಕಪಕ್ಕದ ಹಳ್ಳಿಗಳಿಂದ ಶಾಲೆಗೆ ಬೆಳಿಗ್ಗೆ 9 ಘಂಟೆಗೆ ಚಿಕ್ಕ ಮಕ್ಕಳು ಬರುತ್ತಿರುತ್ತಾರೆ. ಆ ವೇಳೆಯಲ್ಲಿ ಮರಳು ತುಂಬಿರುವ ಭಾರಿ ವಾಹನಗಳು ಓಡಾಡುವುದರಿಂದ ಶಾಲಾ ಮಕ್ಕಳಿಗೆ ತೊಂದರೆಯಾಗುತ್ತದೆ.
- ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯವರೆಗೆ ಹಾಗೂ ಸಾಯಂಕಾಲ 4 ಗಂಟೆಯಿಂದ 5 ಗಂಟೆಯವರೆಗೆ ಮರಳು ತುಂಬಿರುವ ವಾಹನಗಳನ್ನು ನಿರ್ಭಂಧಿಸುವಂತೆ ಕೋರಿರುತ್ತಾರೆ.

<u>ಯೋಜನೆಯ ಸಲಹೆಗಾರರಾದ ಮೆ: ಹಾರಿಝೂನ್ ವೆಂಚುರಿಸ್ ಇವರು</u>

- ಗಣಿಗಾರಿಕೆಯನ್ನು ಹಳ್ಳದಿಂದ 50 ಮೀಟರ್ ಬಫರ್ ಝೋನ್ ಎಂದು ಜಾಗವನ್ನು ಬಿಟ್ಟು ಮರಳನ್ನು ಗಣಿಗಾರಿಕೆ ಮಡಲಾಗುವುದು.
- 3 ಮೀಟರ್ ಆಳದ ವರೆಗೆ ಮಾತ್ರ ಮರಳನ್ನು ಗಣಿಗಾರಿಕೆ ಮಾಡಲಾಗುವುದು.
- ಹಳ್ಳದ ಹತ್ತಿರ ಮರಳು ಗಣಿಗಾರಿಕೆಯನ್ನು ಮಾಡುವುದಿಲ್ಲ ಎಂದು ಗ್ರಾಮಸ್ಥರಿಗೆ ತಿಳಿಸಿದರು.

<u>ಶ್ರೀಮತಿ ಮಂಜುಳಾ, ಜಿ.ಕೆ. ಎಜುಕೇಶನ್ & ರೂರಲ್ ಅರ್ಬನ್ ಡೆವಲಪ್‌ಮೆಂಟ್ ಸೋಸೈಟಿ (ರಿ) ಸಂಸ್ಥೆ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.</u>

- ಸದರಿ ಮರಳು ಗಣಿಗಾರಿಕೆಯನ್ನು ನಡೆಸಲು ಪರವಾನಿಗೆಯನ್ನು ನೀಡಬೇಕು ಎಂದು ಕೇಳಿಕೊಂಡರು.
- ಮರಳು ಗಣಿಗಾರಿಕೆ/ಇನ್ನಾವುದೇ ಉದ್ದಿಮೆಯಾಗಲಿ ಇದಕ್ಕೆ ನಾವು ಬೆಂಬಲವನ್ನು ನೀಡಬೇಕು ಎಂದು ತಿಳಿಸಿದರು ಕಾರಣ ಸ್ಥಳಿಯರಿಗೆ ಉದ್ಯೋಗಾವಕಾಶವನ್ನು ದೊರೆತಂತಾಗುತ್ತದೆ. & ಸುತ್ತ ಮುತ್ತ ಗ್ರಾಮಸ್ಥರಿಗೆ ಒಳ್ಳೆಯ ಬೆಳವಣಿಗೆಯಾಗುತ್ತದೆ.
- ರೈತರಿಗೆ ತೊಂದರೆಯಾಗದಂತೆ ಮರಳು ಗಣಿಗಾರಿಕೆಯನ್ನು ನಡೆಸುವಂತೆ ತಿಳಿಸಿದರು.
- ಗ್ರಾಮಸ್ಥರ ಅಹವಾಲುಗಳೇನಾದರೂ ಇದ್ದರೆ ಅವುಗಳನ್ನು ಗಣಿಗಾರಿಕೆಯ ಮಾಲೀಕರಲ್ಲಿ ನೇರವಾಗಿ ಮಾತನಾಡಿ ಬಗೆಹರಿಸಿಕೊಳ್ಳುವಂತೆ ವಿನಂತಿಸಿದರು.
- ಸ್ಥಳೀಯ ಗ್ರಾಮಸ್ಥರಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದರಿಂದ ಗಣಿಗಾರಿಕೆಯ ಮೇಲೆ ಗ್ರಾಮಸ್ಥರಿಗೆ ಒಳ್ಳೆಯ ಅಭಿಪ್ರಾಯ ಬರುತ್ತದೆ ಎಂದು ತಿಳಿಸಿದರು.
- ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಲಿಕಿತ ರೂಪದಲ್ಲಿ ಪತ್ರವನ್ನು ನೀಡಲಾಗಿರುತ್ತದೆ.

<u>ಶ್ರೀ. ಆಂಜನೇಯಾ ನಾಗೇನಹಳ್ಳಿ, ಸಮಗ್ರ ಪರಿವರ್ತನಾ ಸಮುದಾಯ (ಎಸ್.ಪಿ.ಎಸ್) ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.</u>

- ನಮ್ಮ ಸಂಸ್ಥೆಯಿಂದ ಮರಳು ಗಣಿಗಾರಿಕೆಗೆ ಬೆಂಬಲವಿರುತ್ತದೆ.
- ಸದರಿ ಮರಳು ಗಣಿಗಾರಿಕೆಯನ್ನು ಮಾಡಲು ಅವಕಾಶವನ್ನು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.
- ಮರಳು ಗಣಿಗಾರಿಕೆಯನ್ನು ಮಾಡುವುದರಿಂದ ರಾಜ್ಯಕ್ಕೆ ರಾಜಧನ ಸಿಗುವಂತಾಗುತ್ತದೆ/ಆದಾಯವೂ ಬರುತ್ತದೆ ಎಂದು ತಿಳಿಸಿದರು.
- ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆತಂತಾಗುತ್ತದೆ.
- ಅಕ್ಕ ಪಕ್ಕದಲ್ಲಿರುವ ಸರ್ವೆ ನಂಬರಿನಲ್ಲಿರುವ ರೈತರ ಜೊತೆಗೆ ಒಳ್ಳೆಯ ಬಾಂದವ್ಯವನ್ನು ಇಟ್ಟುಕೊಳ್ಳುವಂತೆ ತಿಳಿಸಿದರು ಇದರಿಂದ ರೈತರ ಹಾಗೂ ಗಣಿಗಾರಿಕೆಯವರ ಸಂಬಂಧ ಚೆನ್ನಾಗಿರುತ್ತದೆ ಎಂದು ತಿಳಿಸಿದರು.

<u>ಶ್ರೀಮತಿ.ಟಿ ಎನ್ ಪ್ರಭಾವತಿ, ಮದರ್ ಡ್ರೀಮ್ಸ್ ರೂರಲ್ & ಅರ್ಬನ್ ಯಜುಕೇಶನ್ ಡೆವಲಪ್‌ಮೆಂಟ್ ಸೋಸೈಟಿ (ರಿ) ಚಿತ್ರದುರ್ಗ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.</u>

- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಳವಡಿಸುವುದು.
- ಸಿ.ಎಸ್.ಆರ್ ನಿಯಮಗಳಡಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಕ್ವಾರಿ ಸುತ್ತ ಮುತ್ತಲೂ ಮರಗಳನ್ನು ಬೆಳೆಸುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.

ಶ್ರೀ ಹೇಮಂತ್ ಕುಮಾರ್, ವಾಯ್‌ಎಮ್‌ಎನ್‌ಆರ್ ಚಾರಿಟೇಬಲ್ ಟ್ರಸ್ಟ್, ಅನಂತಪುರಂ-ಜಿಲ್ಲೆ. ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಳವಡಿಸುವುದು.
- ಸಿ.ಎಸ್.ಆರ್ ನಿಯಮಗಳಡಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಕ್ವಾರಿಯನ್ನು ಪ್ರಾರಂಬಿಸಲು ತಮ್ಮ ಬೆಂಬಲವನ್ನು ಸೂಚಿಸಿದರು.

ಡಾ.ಬಿ.ಆರ್. ಅಂಬೇಡ್ಕರ್, ಸಾಹಿತ್ಯ ಸಾಂಸ್ಕೃತಿಕ ಕ್ರಿಡಾ ಕಲಾ ಯುವಕರ ಸಂಘ (ರಿ) ,ಬೊಮ್ಮನಹಳ್ಳಿ, ಚಿತ್ರದುರ್ಗ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸಿ.ಎಸ್.ಆರ್ ನಿಯಮಗಳಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.
- ಉದ್ಯೋಗಸ್ಥರಿಗೆ ಸುರಕ್ಷಾ ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ತಿಳಿಸಿದರು.

ಶ್ರಿಮತಿ ಲಲಿತಾ, ಅರುಂಧತಿ ಸಾಂಸ್ಕೃತಿಕ ಕಲಾ ಸಂಘ (ರಿ), ಚಳ್ಳಕೇರೆ, ಚಿತ್ರದುರ್ಗ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸಿ.ಎಸ್.ಆರ್ ನಿಯಮಗಳಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಳವಡಿಸುವದು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅದ್ಯಕ್ಷರು ಪರಿಸರ ಅಧಿಕಾರಿಗಳಿಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ಹೇಳಿಕೆಗಳನ್ನು ಕ್ರೋಢಿಕರಿಸಿ ಕನ್ನಡದಲ್ಲಿ ನಡುವಳಿಗಳನ್ನು ತಯಾರಿಸಲು ಸೂಚಿಸಿದರು.

ಮಾನ್ಯ ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸುತ್ತಾ ಸಾರ್ವಜನಿಕ ಆಲಿಕೆ ಸಭೆಯನ್ನು ಮುಕ್ತಾಯಗೊಳಿಸಿ ನಡುವಳಿಗಳನ್ನು ಮಂಡಳಿಯ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದರು.

(ಸಾವಿತ್ರಿ ಬಿ ಕಡಿ ಕ.ಆ.ಸೇ)
ಅಪರ ಜಿಲ್ಲಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು ಕೊಪ್ಪಳ,